# ಗಿರ್ ಸಿಂಹಗಳಿಗೆ ವಲಸೆ ಭಾಗ್ಯ?

ಸಿಂಹಗಳ ಸಂಖ್ಯೆ ಹೆಚ್ಚಿಸಿ ಎನ್ನುವುದೇನೋ ಸರಿಯೇ. ಆದರೆ ಗಿರ್ ಅರಣ್ಯದಲ್ಲಿ ಸಿಂಹಗಳ ಸಂಖ್ಯೆ 523ಕ್ಕೆ ಏರಿಕೆಯಾಗಿರುವುದು, ಅರಣ್ಯದೊಳಗಿನ ಕದನಗಳನ್ನು ಹೆಚ್ಚಿಸಿದೆ. ಗಾಯಗೊಳ್ಳುವ ಸಿಂಹಗಳ ಚಿಕಿತ್ಸಾ ಕೇಂದ್ರ ಈ ಅರಣ್ಯದಲ್ಲಿದೆ! ಈಗ ಸಿಂಹಗಳನ್ನು ಪಕ್ಕದ ರಾಜ್ಯಕ್ಕೆ ಸ್ಥಳಾಂತರಿಸುವ ಪ್ರಸ್ತಾಪವೂ ಇದೆ.

ಚಿತ್ರ– ಲೇಖನ:
**ಎಚ್.ಪವನಕುಮಾರ**





ಗುಜರಾತಿನ 'ಗಿರ್' ರಾಷ್ಟ್ರೀಯ ಉದ್ಯಾನ ಹಾಗೂ ವನ್ಯಜೀವಿಗಳ ಸಂರಕ್ಷಿತ ಸ್ಥಾನ ಏಷ್ಯನ್ ಸಿಂಹಗಳ ಸಂರಕ್ಷಣೆಯಲ್ಲಿ ಅಗ್ರಸ್ಥಾನ ಪಡೆದಿದೆ. ತಜ್ಞರ ಅಭಿಪ್ರಾಯದಂತೆ, 'ಗಿರ್' ಏಷಿಯನ್ ಸಿಂಹಗಳ ಬೃಹತ್ ನೆಲೆ. 1890ರಿಂದ ಇಲ್ಲಿಯವರೆಗೆ ಗಿರ್‌ನಲ್ಲಿ ಸಿಂಹಗಳ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡಿದ್ದರಿಂದ ಅಭಯಾರಣ್ಯದಲ್ಲಿರುವ ಸಿಂಹಗಳ ಸಂಖ್ಯೆ ಗಣನೀಯವಾಗಿ ಹೆಚ್ಚಿದೆ. ಪ್ರಸ್ತುತ ಇಲ್ಲಿ 523 ಸಿಂಹಗಳಿವೆ!

ಸಂಖ್ಯೆಯಲ್ಲಿ ಹೆಚ್ಚಳವಾಗಿದ್ದರಿಂದ ಸಹಜವಾಗಿ ತಮ್ಮ ಪ್ರತ್ಯೇಕ ನೆಲೆ ಸ್ಥಾಪಿಸಲು ಹಾಗೂ ತಮ್ಮ ವಾಸಸ್ಥಾನದ ಗಡಿ ನಿರ್ಧರಿಸಿಕೊಳ್ಳಲು ಸಿಂಹಗಳ ಮಧ್ಯೆ ಕದನಗಳು ನಡೆಯುತ್ತಿವೆ! ಸಿಂಹಗಳ ಸಂಖ್ಯೆಗೆ ಅನುಗುಣವಾಗಿ ಈಗಿರುವ ಅರಣ್ಯ ವ್ಯಾಪ್ತಿ ಕಿರಿದಾಗಿದ್ದು, ಹೆಚ್ಚುವರಿ ಸಿಂಹಗಳಿಗೆ ಪ್ರತ್ಯೇಕ ನೆಲೆಯೊದಗಿಸುವ ತುರ್ತು ಅಗತ್ಯ ಬಂದೊದಗಿದೆ. ಸಿಂಹಗಳ ಸಂರಕ್ಷಣೆಗಾಗಿ ದೀರ್ಘಾವಧಿಯ ಯೋಜನೆಯನ್ನು ರೂಪಿಸಿ ಅಭಯಾರಣ್ಯ ವ್ಯಾಪ್ತಿಯನ್ನು